

ಪಾಲಯ್ಯನ ಕೋಟೆಗೆ ರಕ್ಷೆಯಂತೆ
ಹಬ್ಬಿರುವ ಹಸಿರು ಹಾಗೂ ಕೆರೆ



ಪಾಲಯ್ಯ ಎನ್ನುವ ಪಾಳೇಗಾರನ ನೆನಪಾಗಿ
ಉಳಿದಿರುವ ಕೋಟೆಯ ಪಳೆಯುಳಿಕೆ

> ಅರಣ್ಯ ಇಲಾಖೆಯ ವತಿಯಿಂದ ಆಗಾಗ್ಗೆ ಸಭೆ ನಡೆಸುತ್ತೇವೆ. ಇಲ್ಲಿಯ ಜನರು ನೆಡುತೋಪಿನ ಸ್ಥಿತಿ–ಗತಿ, ಮರಗಿಡಗಳ ಸಂರಕ್ಷಣೆ ಮತ್ತು ಕಾಡಿನ ವಿಸ್ತರಣೆ ಕುರಿತಾದ ವಿಚಾರಗಳನ್ನೇ ಹಂಚಿಕೊಳ್ಳಲು ಉತ್ಸಾಹ ತೋರುತ್ತಾರೆ. ನೆಡುತೋಪುಗಳಲ್ಲಿನ ಮರಗಳನ್ನು ಕಡಿಯುವ ಬಗ್ಗೆ ಊರಿನ ಜನ ಒಮ್ಮೆಯೂ ಬೇಡಿಕೆ ಇಟ್ಟಿಲ್ಲ. ಕಾಡಿನ ಮೇಲೆ ಊರಿನವರಿಗೆ ವಿಶೇಷ ಕಾಳಜಿ. ಅವರ ಪರಿಸರ ಪ್ರೇಮ ಮತ್ತು ಬದ್ಧತೆ ಅಭಿನಂದನೀಯ.
>
> **–ಎನ್.ಎಂ. ಕರಿಬಸಯ್ಯ,**
> **ಅರಣ್ಯ ರಕ್ಷಕ, ಕೂಡ್ಲಿಗಿ ಪ್ರಾದೇಶಿಕ ಅರಣ್ಯ ವಲಯ**

ಜೀವಾಳ ಆಗಿರುವ ಬೆಟ್ಟ–ಗುಡ್ಡಗಳು, ಹೊಲ–ಗದ್ದೆಗಳು... ಇಂತಹ ಪರಿಸರದಲ್ಲಿ ಏನಿದು ಕಾಡು? ಯಾವುದಿದು ಹಸಿರು ಕೋಟೆ? ಆ ಕೋಟೆಗೆ ಜನರದೇ ಸಂರಕ್ಷಣೆ ಎಂದರೆ ಹೇಗೆ? ಈ ಪ್ರಶ್ನೆಗಳಿಗೆಲ್ಲ ಉತ್ತರ ದೊರೆಯಲು ಪಾಲಯ್ಯನ ಕೋಟೆಗೆ ಬರಬೇಕು. ಬನ್ನಿ ಹಸಿರುಕೋಟೆಗೆ, ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಪಾಲಯ್ಯನಕೋಟೆಗೆ.

ಅರಣ್ಯ ಇಲಾಖೆ ಗಿಡಗಳನ್ನು ಬೆಳೆಸಲು, ಅರಣ್ಯ ಸಂರಕ್ಷಿಸಲು ನಾನಾ ಯೋಜನೆ ಹಾಕಿಕೊಳ್ಳುತ್ತದೆಯಷ್ಟೇ; ಅದರಲ್ಲಿ ನೆಡು ತೋಪುಗಳನ್ನು ಬೆಳೆಸುವುದೂ ಒಂದು. ಇಂತಹ ತೋಪುಗಳು ಅರಣ್ಯ ಇಲಾಖೆಯ ಸಂಪೂರ್ಣ ಜವಾಬ್ದಾರಿ ಇರುವರೆಗೆ ಮಾತ್ರ ಚೆನ್ನಾಗಿರುತ್ತವೆ. ಮೂರು ವರ್ಷಗಳ ಕಾಲಾವಧಿ ಮುಗಿದ ನಂತರ ನಿಯಮದಂತೆ ಅರಣ್ಯ ಸಮಿತಿಗೆ ಹೆಚ್ಚಿನ ಹೊಣೆಗಾರಿಕೆ ನೀಡಲಾಗುತ್ತದೆ. ನೆಡುತೋಪುಗಳ ಲಾಲನೆ–ಪಾಲನೆ ಸಮುದಾಯಕ್ಕೆ ಹಸ್ತಾಂತರ ಆಗಿದ್ದೇ ತಡ ನೆಡುತೋಪೆನ್ನುವುದು ಕಡಿದಿಟ್ಟ, ಕಾಣೆಯಾದ ಅರಣ್ಯವಾಗುವ ಪ್ರಕ್ರಿಯೆ ಶುರುವಾಗುತ್ತದೆ. ಈ ವೈರುಧ್ಯಕ್ಕೆ ಪಾಲಯ್ಯನ ಕೋಟೆ ಅಪವಾದ. ಹದಿಮೂರು ವರ್ಷಗಳ ಹಿಂದೆ ಸರ್ಕಾರ ಜನರಿಗೆ ವರ್ಗಾಯಿಸಿದ ನೆಡುತೋಪು ಇಂದಿಗೂ ಉಳಿದಿದೆ, ದಟ್ಟವಾಗಿದೆ. ಗ್ರಾಮಸ್ಥರ ಇಚ್ಛಾಶಕ್ತಿಯಿಂದ ನೆಡುತೋಪು ಯೋಜನೆ ಅಕ್ಷರಶಃ ನೂರಕ್ಕೆ ನೂರರಷ್ಟು ಯಶಸ್ಸು ಕಂಡಿದೆ!.

## ಕಾಡು ನಾಶ ಕಣ್ತೆರೆಸಿತು

ಸುಮಾರು ಎರಡು ದಶಕಗಳ ಹಿಂದೆ ಊರಿನ ಕೆರೆಯ ಜಾಗ ಸೇರಿದಂತೆ ಸುತ್ತಲಿನ ಪ್ರದೇಶದಲ್ಲಿ ಸರ್ಕಾರ ಗಿಡಗಳನ್ನು ನೆಡತೊಡಗಿತು. ಆದರೆ ಗ್ರಾಮಸ್ಥರ ನಿರ್ಲಕ್ಷ್ಯದಿಂದ ನೆಟ್ಟ ಗಿಡಗಳಲ್ಲಿ ಬಹುತೇಕ ಊರ್ಜಿತವಾಗಲಿಲ್ಲ. ವಿಶೇಷವಾಗಿ ಕೆರೆ ಅಂಗಳದಲ್ಲಿ ಬೆಳೆದ ಮರಗಿಡಗಳ ಮೇಲೆ ಪಕ್ಕದ ಊರಿನವರ ದೃಷ್ಟಿಯೂ ಬಿತ್ತು. ಅವರನ್ನು ನೋಡಿ ಇವರು, ಇವರನ್ನು ನೋಡಿ ಅವರು ಸ್ಪರ್ಧೆಗೆ ಬಿದ್ದು ಕೆಲವೇ ವರ್ಷಗಳಲ್ಲಿ ನೂರಾರು ಗಿಡಗಳ ಮಾರಣಹೋಮ ಮಾಡಿದರು. ಕೆರೆ ಅಂಗಳ ಬಟಾಬಯಲಾಯಿತು. ವರ್ಷಗಳು